JUNE 16, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಹಣ ಅಗತ್ಯದಷ್ಟು ಮೀಸಲಿದೆ – ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ.**
- **'ಅಕ್ಷರ ಆವಿಷ್ಕಾರ'; ಕಲ್ಯಾಣ ಕರ್ನಾಟಕದ ಶಾಲಾ ಫಲಿತಾಂಶ ಸುಧಾರಣೆಗೆ, ವಿಶೇಷ ಯೋಜನೆ.**
- **'ಅತಿಸಾರ ನಿಲ್ಲಿಸಿ'; 45 ದಿನಗಳ, ಅಭಿಯಾನಕ್ಕೆ ಆರೋಗ್ಯ ಇಲಾಖೆ, ಚಾಲನೆ.**
- **ಹುಬ್ಬಳ್ಳಿ–ಧಾರವಾಡ ಮಧ್ಯೆ ಇಲೆಕ್ಟ್ರಿಕ್ ರ್‍ಯಾಪಿಡ್ ಟ್ರಾನ್ಸಿಟ್ ಯೋಜನೆ ಅನುಷ್ಠಾನಕ್ಕೆ, ಭಾಗೀದಾರರೊಂದಿಗೆ, ಸಮಾಲೋಚನೆ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯವಿರುವಷ್ಟು, ಹಣ ಮೀಸಲಿದೆ. ಪಂಚ ಖಾತ್ರಿ ಯೋಜನೆಗಳ ಅನುಷ್ಠಾನದ ಜೊತೆ, ಎಲ್ಲ ಅಭಿವೃದ್ಧಿ ಕಾಮಗಾರಿಗಳನ್ನು, ಹಂತಹಂತವಾಗಿ ಕಾರ್ಯಗತಗೊಳಿಸಲಾಗುತ್ತಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ದಾವಣಗೆರೆ ಜಿಲ್ಲೆಯ, ಸಾವಿರದ 350 ಕೋಟಿ ರೂಪಾಯಿ ವೆಚ್ಚದ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ, ಅವರು ಮಾತನಾಡಿದರು. ಕಳೆದ ಎರಡು ವರ್ಷಗಳಲ್ಲಿ, ಬೇಡಿಕೆಗೆ ಅನುಗುಣವಾಗಿ, ರಾಜ್ಯ ಮುಂಗಡಪತ್ರದ ಗಾತ್ರ ಹೆಚ್ಚಿದೆ. ಸರಕು ಹಾಗೂ ಸೇವಾ ತೆರಿಗೆ – ಜಿ.ಎಸ್.ಟಿ. ಸಂಗ್ರಹದಲ್ಲೂ, ಕರ್ನಾಟಕ ಇಡೀ ದೇಶಕ್ಕೆ ಎರಡನೇ ಸ್ಥಾನದಲ್ಲಿದೆ. ರಾಜ್ಯದ ಆರ್ಥಿಕ ಪ್ರಗತಿಯ ವೇಗವರ್ಧಿಸಲಾಗಿದೆ ಎಂದರು. 1 ಸಾವಿರದ 892 ಪೌರಕಾರ್ಮಿಕರಿಗೆ, ಮುಖ್ಯಮಂತ್ರಿ ಮನೆಗಳ ಹಕ್ಕು ಪತ್ರ ನೀಡಿದರು.**

<><><>

ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿ, ಶಾಲಾ ಶಿಕ್ಷಣದ ಗುಣಮಟ್ಟ, ಕಲಿಕಾ ಸುಧಾರಣೆ ಹಾಗೂ ಫಲಿತಾಂಶ ಸುಧಾರಿಸಲು, 'ಅಕ್ಷರ ಆವಿಷ್ಕಾರ' ಯೋಜನೆಯನ್ನು, ಜಾರಿಗೊಳಿಸಲಾಗಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಬಳ್ಳಾರಿಯಲ್ಲಿ ಮಾತನಾಡಿದ ಅವರು, ಹಂತಹಂತವಾಗಿ, ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯ ಉತ್ತಮ ಪಡಿಸಿ, ಕಲಿಕೆ ಮತ್ತು ಬೋಧನೆಯ ವಾತಾವರಣ, ಮೌಲ್ಯಯುತಗೊಳಿಸಲು, ತಮ್ಮ ಇಲಾಖೆ ಬದ್ಧವಿದೆ, ಎಂದರು. ಸರ್ಕಾರಿ ಶಾಲೆಗಳಲ್ಲಿ, ಮಕ್ಕಳ ಹಾಜರಾತಿ ಖಾತ್ರಿ ಪಡಿಸಲು, ಬಯೋಮೆಟ್ರಿಕ್-ಫೇಸ್ ರಿಕಗ್ನಿಶನ್ ವ್ಯವಸ್ಥೆ ಜಾರಿಗೆ ತರಲಾಗುವುದು. ಈಗಾಗಲೇ, ಶೇಕಡ 94 ರಷ್ಟು ಪಠ್ಯಪುಸ್ತಕಗಳನ್ನು ಮಕ್ಕಳಿಗೆ ಪೂರೈಸಲಾಗಿದೆ ಎಂದು, ಹೇಳಿದರು.

<><><>

ಉತ್ತರಕನ್ನಡ ಜಿಲ್ಲೆಯ, ಜೋಯ್ಡಾ ತಾಲೂಕು, ರಾಜ್ಯದ ಮೊದಲ ಸಾವಯವ ತಾಲೂಕು ಎಂದು, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ ಇಂದು, ಅಧಿಕೃತವಾಗಿ ಘೋಷಿಸಲಿದ್ದಾರೆ. ಕೃಷಿ ಇಲಾಖೆ, ಜೋಯ್ಡಾದ ಬಾಬು ಜಗಜೀವನ ರಾಮ ಸಭಾಭವನದಲ್ಲಿ, ವಿಶೇಷ ಕಾರ್ಯಕ್ರಮ ಆಯೋಜಿತವಾಗಿದೆ. ಜೋಯ್ಡಾವನ್ನು, ಸಂಪೂರ್ಣ ಸಾವಯವ ಕೃಷಿ ತಾಲೂಕಾಗಿ ಪರಿವರ್ತಿಸುವ ಯೋಜನೆಗೆ, ಅವರು ಚಾಲನೆ ನೀಡಲಿದ್ದಾರೆ.

<><><>

'ತೀವ್ರ ಅತಿಸಾರ ಬಾಧೆಯಿಂದ, ಮಕ್ಕಳ ಮರಣ ಪ್ರಮಾಣವನ್ನು ಶೂನ್ಯಕ್ಕೆ ತರೋಣ' ಎಂಬ, ಧ್ಯೇಯದೊಂದಿಗೆ. 45 ದಿನಗಳ, 'ಅತಿಸಾರ ನಿಲ್ಲಿಸಿ ಅಭಿಯಾನ'ಕ್ಕೆ, ಆರೋಗ್ಯ ಇಲಾಖೆ ರಾಜ್ಯಾದ್ಯಂತ ಆರಂಭಿಸಿದೆ. ಜುಲೈ 31ರ ವರೆಗೆ ಅಬಿಯಾನ ನಡೆಯಲಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಗದಗ ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ವೆಂಕಟೇಶ ರಾಠೋಡ.

<><><>

ಧ್ವನಿ: ವೆಂಕಟೇಶ ರಾಥೋಡ್ 53 ಸೆಕೆಂದುಗಳು

<><><>

ಮಕ್ಕಳಲ್ಲಿ ಅತಿಸಾರ ಬಾಧೆಯನ್ನು ಹತೋಟಿಗೆ ತರಲು, ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ, ಒ.ಆರ್.ಎಸ್. ಪಾನಕ ವಿತರಿಸುವ, ಜಿಂಕ್ ಕಾರ್ನರ್‌ಗಳನ್ನು ಸ್ಥಾಪಿಸಲಾಗಿದೆ. ವಯಕ್ತಿಕ ಸ್ವಚ್ಛತೆ ಹಾಗೂ ಶುಚಿತ್ವದ ಬಗ್ಗೆ, ಪಾಲಕರಲ್ಲಿ ತಿಳಿವಳಿಕೆ ಮೂಡಿಸಲಾಗುತ್ತಿದೆ ಎಂದು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಆರೋಗ್ಯಾಧಿಕಾರಿ ಡಾಕ್ಟರ್ ಕೃಷ್ಣ ರೆಡ್ಡಿ ತಿಳಿಸಿದ್ದಾರೆ.

<><><>

ಉಡುಪಿಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ, ಅತಿಸಾರ ಕೊನೆಗೊಳಿಸುವ ಅಭಿಯಾನಕ್ಕೆ, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಬಸವರಾಜ ಹುಬ್ಬಳ್ಳಿ ಚಾಲನೆ ನೀಡಿದರು.

<><><>

ಹುಬ್ಬಳ್ಳಿ- ಧಾರವಾಡ ಮಧ್ಯೆ, ಸಾರ್ವಜನಿಕ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು, ಇಲೆಕ್ಟ್ರಿಕ್ ರ್‍ಯಾಪಿಡ್ ಟ್ರಾನ್ಸಿಟ್ – ಇ.ಆರ್.ಟಿ. ಬಸ್ ಸೇವೆ, ಶೀಘ್ರ ಕಾರ್ಯಾರಂಭಿಸಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ಧಾರವಾಡದ ಸೃಜನಾ ರಂಗ ಮಂದಿರದಲಿ ಜರುಗಿದ, ಇ.ಆರ್.ಟಿ ಸಾರಿಗೆ ವ್ಯವಸ್ಥೆ ಅನುಷ್ಠಾನ ಕುರಿತು, ಸಾರ್ವಜನಿಕರು ಹಾಗೂ ಭಾಗಿದಾರರೊಂದಿಗೆ, ಸಮಾಲೋಚನಾ ಸಭೆಯಲ್ಲಿ ಅವರು, ಮಾತನಾಡಿದರು. ಮುಂಬರುವ ಎರಡು ತಿಂಗಳಲ್ಲಿ, ವಿಸ್ತೃತ

ಯೋಜನಾ ವರದಿ ಸಲ್ಲಿಕೆಯಾಗಲಿದೆ. ಸರ್ಕಾರ, ಖಾಸಗಿ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಿದೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

'ಒಂದೇ ಭೂಮಿ ಹಾಗೂ ಒಂದೇ ಆರೋಗ್ಯಕ್ಕಾಗಿ, ಯೋಗ' ಧ್ಯೇಯದೊಂದಿಗೆ, 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಇದೇ 21 ರಂದು, ರಾಜ್ಯಾದ್ಯಂತ ವಿಶೇಷವಾಗಿ ಜರುಗಲಿದೆ. ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲೂಕಿನ, ಸರ್ಕಾರಿ ಆಯುರ್ವೇದ ಆಸ್ಪತ್ರೆಯ, ಡಾಕ್ಟರ್ ಕೆ.ಎಚ್. ಗುರುಬಸವರಾಜ್, ಆಯುಷ್ ಇಲಾಖೆ, ಯೋಗ ದಿನಾಚರಣೆಗಾಗಿ ಕೈಗೊಂಡ ಪೂರ್ವ ಸಿದ್ಧತೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಧ್ವನಿ: ಡಾಕ್ಟರ್ ಕೆ ಎಚ್ ಗುರುಬಸವರಾಜ್ 41 ಸೆಕೆಂದುಗಳು

<><><>

ಶಿವಮೊಗ್ಗದ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ, ಯೋಗ ದಿನಾಚರಣೆ ಜರುಗಲಿದ್ದು, ಸಕಲ ಸಿದ್ಧತೆಗಳು ಅಂತಿಮ ಹಂತದಲ್ಲಿವೆ ಎಂದು, ಅಪರ ಜಿಲ್ಲಾಧಿಕಾರಿ ಸಿದ್ಧಲಿಂಗ ರೆಡ್ಡಿ, ತಿಳಿಸಿದ್ದಾರೆ.

<><><>

ರಾಜ್ಯದ ಕರಾವಳಿ ಹಾಗೂ ಮಲೆನಾಡಿನಲ್ಲಿ, ಮಳೆ ಮುಂದುವರೆದಿದೆ. ಹವಾಮಾನ ಇಲಾಖೆ ಮುನ್ಸೂಚನೆಯಂತೆ, ಇಂದಿನಿಂದ ಮೂರು ದಿನ, ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡು ಮತ್ತು ಉತ್ತರ ಒಳನಾಡಿನಲ್ಲಿ, ಭಾರಿ ಮಳೆಯಾಗುವ ಸಾಧ್ಯತೆ ಇದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ, ಮುನ್ನೆಚ್ಚರಿಕೆ ನೀಡಲಾಗಿದೆ.

<><><>

ಉತ್ತರಕನ್ನಡ ಜಿಲ್ಲೆ, ಭಟ್ಕಳದಲ್ಲಿ, ಒಂದೇ ದಿನದಲ್ಲಿ 176 ದಶಾಂಶ 3 ಮಿಲ್ಲಿ ಮೀಟರ್ ಮಳೆಯಾಗಿದೆ. ಎರಡು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಅಂಕೋಲಾ ತಾಲೂಕಿನ ಸುಂಕಸಾಳ ಬಳಿ, ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂ ಕುಸಿತ ಸಂಭವಿಸಿದೆ.

<><><>

ಧಾರವಾಡ ಜಿಲ್ಲೆಯಾದ್ಯಂತ, ಮಳೆಯಿಂದ ಹಾನಿಗೊಳಗಾದ ರಸ್ತೆಗಳನ್ನು, ದುರಸ್ಥಿಗೊಳಿಸಿ, ಸಂಚಾರಕ್ಕೆ ಅನುವು ಮಾಡುವಂತೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ, ಸೂಚಿಸಿದ್ದಾರೆ. ಹಾಸನದ ಸಾಲಗಾಮೆ ಹೋಬಳಿ ವ್ಯಾಪ್ತಿಯಲ್ಲಿ, ಸತತ ಮಳೆಯಿಂದ, ಮುಸುಕಿನ ಜೋಳಕ್ಕೆ ಹಾನಿಯಾಗಿದೆ. ಶಾಸಕ ಸ್ವರೂಪ ಪ್ರಕಾಶ, ಭೇಟಿ ನೀಡಿ ಪರಿಶೀಲಿಸಿದರು.

<><><>

ರಾಜ್ಯದಲ್ಲಿ ಅತಿ ಹೆಚ್ಚು ರಕ್ತ ಸಂಗ್ರಹಿಸುವ, 4 ಸರ್ಕಾರಿ ರಕ್ತ ಕೇಂದ್ರಗಳನ್ನು, ರೀಜನಲ್ ಸೆಂಟರ್ ಆಫ್ ಎಕ್ಸಲೆನ್ಸ್ ಬ್ಲಡ್ ಬ್ಯಾಂಕ್‌ಗಳಾಗಿ ಮೇಲ್ದರ್ಜೆಗೆ ಏರಿಸಲಾಗುತ್ತಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ, ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ರಕ್ತ ಸಾಗಣಿಕೆ ಮಾಡುವ, 9 ವಾಹನಗಳು ಸದ್ಯ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಶೀಘ್ರ, ನಾಲ್ಕು ಹೊಸ ರಕ್ತ ಸಾಗಾಣಿಕೆ ಮತ್ತು ರಕ್ತ ಸಂಗ್ರಹಣೆ ವಾಹನಗಳನ್ನು ಖರೀದಿಸಲಾಗುವುದು, ಎಂದರು. ಪ್ಲಾಸ್ಮಾ ಕೊರತೆಯಿಂದ, ಬಾಣಂತಿಯರ ಸಾವು ತಡೆಯಲು, ರಾಜ್ಯದ 147 ಸರ್ಕಾರಿ ತಾಲೂಕು ಆಸ್ಪತ್ರೆಗಳಲ್ಲಿ, ಪ್ಲಾಸ್ಮಾ ಸಂಗ್ರಹ ಹಾಗೂ ಶೇಖರಣೆ ಘಟಕ ಪ್ರಾರಂಭಿಸಲಾಗುವುದು ಎಂದು ಸಚಿವರು ಹೇಳಿದರು.

<><><>

ವಿಶ್ವ ರಕ್ತದಾನಿಗಳ ದಿನಾಚರಣೆ ಹಿನ್ನೆಲೆ, ಕಲಬುರಗಿ ಉಗ್ರಾಣ ಕೇಂದ್ರದ ಸಭಾಭವನದಲ್ಲಿ ಆಯೋಜಿತ, ರಕ್ತ ದಾನ ಶಿಬಿರಕ್ಕೆ, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಇಂದು ಬೆಳಗ್ಗೆ ಚಾಲನೆ ನೀಡಲಿದ್ದಾರೆ.

<><><>

ಭಾರತೀಯ ಅಂಚೆ ಇಲಾಖೆ, ಅಡ್ವಾನ್ಸ್ಡ್ ಪೋಸ್ಟಲ್ ಟೆಕ್ನಾಲಜಿ ಅಭಿವೃದ್ಧಿಪಡಿಸಿದ್ದು, ಬಾಗಲಕೋಟೆ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಇಂದಿನಿಂದ ಪ್ರಾಯೋಗಿಕವಾಗಿ ಅನುಷ್ಠಾನಗೊಳ್ಳುತ್ತಿದೆ. ಗ್ರಾಹಕರು ಆನ್ ಲೈನ್‌ನಲ್ಲಿ ನಿಗದಿತ ಶುಲ್ಕ ಪಾವತಿಸಿದರೆ, ಅಂಚೆ ಅಣ್ಣ ಅಥವಾ ಅಕ್ಕ ಮನೆ ಬಾಗಿಲಿಗೆ ಬಂದು, ಪಾರ್ಸಲ್ ಸ್ವೀಕರಿಸಿ, ನಮೂದಿತ ವಿಳಾಸಕ್ಕೆ ಕಳುಹಿಸಲಿದ್ದಾರೆ. ಬಾಗಲಕೋಟೆ ಹಾಗೂ ಮೈಸೂರು ಜಿಲ್ಲೆಗಳಲ್ಲಿ, ಪ್ರಾಯೋಗಿಕ ಅನುಭವ ಆಧರಿಸಿ, ದೇಶದೆಲ್ಲೆಡೆ ವಿಸ್ತರಿಸಬಹುದು ಎಂದು, ಬಾಗಲಕೋಟೆ ಅಂಚೆ ಅಧೀಕ್ಷಕ ಎಚ್.ಬಿ ಹಸಬಿ ತಿಳಿಸಿದ್ದಾರೆ.

<><><>

ಶಿವಮೊಗ್ಗ ಅಂಚೆ ವಿಭಾಗ, ಇದೇ 20ನೇ ತಾರೀಖು, ಅಂಚೆ ಅದಾಲತ್ ಆಯೋಜಿಸಿದೆ ಎಂದು, ಅಂಚೆ ಅಧೀಕ್ಷಕ ಜಯರಾಮ ಶೆಟ್ಟಿ ತಿಳಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು, ಇಂದು ವಿಜಯನಗರಕ್ಕೆ ಭೇಟಿ ನೀಡಲಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆ, ನಂದಿ ಗಿರಿಧಾಮದಲ್ಲಿ ಇದೇ 19 ರಂದು, ರಾಜ್ಯ ಸಚಿವ ಸಂಪುಟ ಸಭೆ ನಡೆಯಲಿದೆ. ಅಂದು ಬೆಳಗ್ಗೆ 6 ರಿಂದ ಮಧ್ಯಾಹ್ನ 2 ಗಂಟೆಯ ವರೆಗೆ, ಭೋಗ ನಂದೀಶ್ವರ ದೇವಾಲಯಕ್ಕೆ, ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ.

ಕೊಪ್ಪಳ ಜಿಲ್ಲೆ, ಅಂಜನಾದ್ರಿ ಬೆಟ್ಟ ಪ್ರದೇಶದ ಅಭಿವೃದ್ಧಿ ಹಿನ್ನೆಲೆ, ವಸತಿ ಸಮುಚ್ಚಯದ ಕಾಮಗಾರಿಯನ್ನು, ಡಿಸೆಂಬರ್ ಒಳಗೆ ಪೂರ್ಣಗೊಳಿಸಲಾಗುವುದು ಎಂದು, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ.ಪಾಟೀಲ ತಿಳಿಸಿದ್ದಾರೆ.

ಭಾರತೀಯ ಸೇನೆ ಸೇರಲು, ಆನ್‌ಲೈನ್ ಸಾಮಾನ್ಯ ಪ್ರವೇಶ ಪರೀಕ್ಷೆ-2025, ಇದೇ 30ನೇ ತಾರೀಖಿನಿಂದ, ಜುಲೈ 10ರ ವರೆಗೆ ನಡೆಯಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಹಣ ಅಗತ್ಯದಷ್ಟು ಮೀಸಲಿದೆ – ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ.

'ಅಕ್ಷರ ಆವಿಷ್ಕಾರ'; ಕಲ್ಯಾಣ ಕರ್ನಾಟಕದ ಶಾಲಾ ಫಲಿತಾಂಶ ಸುಧಾರಣೆಗೆ, ವಿಶೇಷ ಯೋಜನೆ.

'ಅತಿಸಾರ ನಿಲ್ಲಿಸಿ'; 45 ದಿನಗಳ, ಅಭಿಯಾನಕ್ಕೆ ಆರೋಗ್ಯ ಇಲಾಖೆ, ಚಾಲನೆ.

ಹುಬ್ಬಳ್ಳಿ-ಧಾರವಾಡ ಮಧ್ಯೆ, ಇಲೆಕ್ಟ್ರಿಕ್ ರ‍್ಯಾಪಿಡ್ ಟ್ರಾನ್ಸಿಟ್ ಯೋಜನೆ ಅನುಷ್ಠಾನಕ್ಕೆ, ಭಾಗೀದಾರರೊಂದಿಗೆ, ಸಮಾಲೋಚನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>